ಸಂಸಾರಗಳು ಸುಖಿಯಾಗಬಹುದು. ಇದು ಜೋಳಿಗೆಯ ತಾಕತ್ತು.

ದಾಸವರೇಣ್ಯರು ಕೈಯಲ್ಲಿ ತಂಬೂರಿ ಹಿಡಿದು, ನಿಷ್ಕಲ್ಮಶ ಜೋಳಿಗೆಯಿಂದ, ಆಡಂಬರವಿಲ್ಲದ ಭಕ್ತಿಯನ್ನು ಗೀತೆಗಳ ಮೂಲಕ ಜನರಿಗೆ ತಲುಪಿಸಿದರು. ಪರಮ ಶಕ್ತಿಯನ್ನು ಹಲವು ಭಾವಗಳಲ್ಲಿ ಕೊಂಡಾಡಿದರು.

'ಮಧುಕರ ವೃತ್ತಿ ಎನ್ನದು' ಎನ್ನುವ ಪುರಂದರರು, 'ಕುಲ ಕುಲ ಕುಲವೆನ್ನುತಿಹರು; ಕುಲವಾವುದು ಸತ್ಯ ಸುಖವುಳ್ಳ ಜನರಿಗೆ' ಎನ್ನುವ ಕನಕರು ಹೆಗಲಿಗೇರಿಸಿದ್ದು ಈ ಜೋಳಿಗೆಯನ್ನೇ. ಇದರಲ್ಲಿರುವುದು ಕಪಟವಿಲ್ಲದ ಸರ್ವ ಸಮರ್ಪಣೆಯ ಸರಕುಗಳು. ಸಂಕಟ ಬಂದಾಗ ವೆಂಕಟರಮಣನ ನೆನೆಯುವಂತದ್ದಲ್ಲ.

ಅಸ್ಸಾಮ್ ರಾಜ್ಯದಲ್ಲಿ ಸೂರ್ಯನ ಕಿರಣ ಭೂಮಿಗೆ ಸ್ಪರ್ಶಿಸುವ ಸಮಯದಲ್ಲಿ ಬೌದ್ಧ ಭಿಕ್ಷುಗಳ ಗುಂಪು ಭಿಕ್ಷಾಟನೆಗೆ ಹೊರಡುವುದು. ಹೆಂಗಳೆಯರು, ಮಕ್ಕಳು, ಹಣ್ಣು–ಹಂಪಲುಗಳ ಭಿಕ್ಷೆಯನ್ನು ಹಾಕಿ ಅವರ ಜೋಳಿಗೆಯನ್ನು ತುಂಬಿಸುವರು. ಅವರ ಪ್ರಸನ್ನ ಮುಖವನ್ನು ನೋಡಿ, ವಂದಿಸಿ ದಿನಚರಿಯ ಕಾರ್ಯಕ್ರಮ ಪ್ರಾರಂಭಿಸುವರು. ಇದನ್ನು ನೋಡುವಾಗ ಎಂತಹವರ ಮನಸ್ಸೂ ತಿಳಿಯಾಗುವುದು. ದುರಾಸೆಯಿಂದ ದೂರವಿರುವ ಈ ಜೋಳಿಗೆಯಲ್ಲಿ ಪಂಚಶೀಲ ತತ್ವಗಳಿವೆ, ಅಷ್ಟಾಂಗ ಮಾರ್ಗಗಳಿವೆ. ಅದೊಂದು ಸಹಾನುಭೂತಿಯ ಸ್ನೇಹಮಯ ಜೋಳಿಗೆ.

ಸರಳತೆಯನ್ನು ಬಿಂಬಿಸುವ ಈ ಜೋಳಿಗೆ ಸಾಮಾನ್ಯದ್ದಲ್ಲ. ನಾವು ಸಭೆ ಸಮಾರಂಭಗಳಿಗೆ ಹೋದಾಗ ಅನೇಕ ತರಹದ ವೇಷಭೂಷಣಗಳಿರುವ ವ್ಯಕ್ತಿಗಳನ್ನು ನೋಡುತ್ತೇವೆ. ಅವರಲ್ಲಿ ಜೋಳಿಗೆ ಚೀಲವನ್ನು ಹೆಗಲಿಗೇರಿಸಿದವರ ಕಂಡೊಡನೆಯೇ ಒಂದು ಬಗೆಯ ಗೌರವದ ಭಾವನೆ ಸಹಜವಾಗಿ ಮೂಡುತ್ತದೆ. ಆ ವ್ಯಕ್ತಿಯಲ್ಲಿ ಸರಳತೆ ಸಹಜತೆ ಎದ್ದುಕಾಣುತ್ತದೆ. ಅಂತಹ ವ್ಯಕ್ತಿಗಳು ಯಾರ ಮಾತಿಗೂ ಕಿವಿಗೊಡುವುದಿಲ್ಲ. ಹತ್ತು ಜನರಿರುವಲ್ಲಿಯೂ, ಸಾವಿರ ಜನರಿರುಲ್ಲಿಯೂ ಅದೇ ಜೋಳಿಗೆ. ಸಭೆಯಲ್ಲಿ ಕುಳಿತಿರುವಾಗಲೂ, ವೇದಿಕೆಯಲ್ಲಿ ಇರುವಾಗಲೂ ಅದೇ ಸಂಗಾತಿ ಅವರಿಗೆ. ಯಾರು ಏನೆಂದುಕೊಂಡರೇನು? ನಾವು ಇರುವ ಹಾಗೆ ಇರಬೇಕು ಎನ್ನುವ ಮುಕ್ತ ಸ್ವಭಾವದವರು. ಉಡುಪು ನೋಡಿ ವ್ಯಕ್ತಿಯ ಘನತೆಯನ್ನು ಮಾಪನ ಮಾಡುವ ಇಂದಿನ ಸಮಾಜಕ್ಕೆ ಸವಾಲೆಸೆಯುವಂತೆ ಇರುವವರು ಅನೇಕರು. ಸಾಹಿತಿಗಳ ವಿಚಾರಗಳು ಇದಕ್ಕೆ ಹೊರತಾಗಿಲ್ಲ. ಹೆಚ್ಚಿನ ಸಮಯವನ್ನು ಅಧ್ಯಯನದಲ್ಲಿ, ಬರವಣಿಗೆಯಲ್ಲಿ ಕಳೆಯುವ ಅವರಿಗೆ ಆಡಂಬರದ ವೇಷಭೂಷಣಗಳಿಗೆ ಸಮಯಹರಣ ಮಾಡುವುದು ಬೇಕಿರುವುದಿಲ್ಲ. ಹಾಗಾಗಿ ಹೆಚ್ಚಿನ ಸಾಹಿತಿಗಳ ಹೆಗಲಲ್ಲಿರುವುದು ಜೋಳಿಗೆಯೇ. ಪುಸ್ತಕ, ಹಾಳೆ, ಲೇಖನಿ ಇವಿಷ್ಟೇ ಅದರಲ್ಲಿರುವ ಸ್ವತ್ತುಗಳು. ಅವರ ವಿಶಾಲ ಮನೋಭಾವದ ಜೋಳಿಗೆಯಲ್ಲೂ ಅಷ್ಟೆ. ಪ್ರಪಂಚದ ಸೂಕ್ಷ್ಮ ಆಗುಹೋಗುಗಳನ್ನು ಅರಿಯುವುದು, ಅದಕ್ಕಿಂತ ಹೆಚ್ಚಿನದನ್ನು ಸಮಾಜಕ್ಕೆ ಕೊಡುವುದು. ಒಟ್ಟಾರೆ ಅರಿವಿನ, ಜ್ಞಾನದ ವಿನಿಮಯ.

ಎಲ್ಲಕ್ಕಿಂತಲೂ ಮಿಗಿಲಾಗಿ ಇರುವುದು ಅಮ್ಮನ ಮಡಿಲ ಜೋಳಿಗೆ. ಅವಳ ಸೀರೆಯ ಸೆರಗಿನಲ್ಲಿ ಕುಳಿತು ಆಗ ಜೋಲಿಯಾಡಿದ್ದನ್ನು ಮರೆಯಲಾಗದು. ತಾಯಿ ಮಡಿಲಿನ ಜೋಳಿಗೆಯು ಮಗುವನ್ನು ತಿಳಿಯಾದ ವಾತ್ಸಲ್ಯದಿಂದ ಸದಾ ಸಲಹುತ್ತಲೇ ಇರುತ್ತದೆ. ಕಟ್ಟಿದ ಸೀರೆಯಲ್ಲಿ ಪುಟ್ಟ ಕಂದನನ್ನು ಮಲಗಿಸಿ ಜೋಗುಳ ಹಾಡಿ ತಾಯ್ತನದ ಸುಖವನ್ನು ಕೊಡುವ ಈ ಜೋಳಿಗೆ ಸಾಮಾನ್ಯದ್ದಲ್ಲ. ಕಂದನಿಗೂ ಅದರಲ್ಲಿ ಮಲಗುವಾಗ ಒಂದು ಬಗೆಯ ಗರ್ಭ ಸುಖ. ಮರದ ತೊಟ್ಟಿಲಿನಲ್ಲಿ ಮಲಗಲೊಲ್ಲೆನೆಂಬ ಮಗು ಸೀರೆಯ ಜೋಳಿಗೆಯಲ್ಲಿ ಜೋಲಿ ಹೊಡೆಯುತ್ತ ಸುಮ್ಮನೆ ಮಲಗಿಬಿಡುತ್ತದೆ.

ಕೂಲಿ ಕಾರ್ಮಿಕರಿಗೂ ಜೋಳಿಗೆಗೂ ಅಕ್ಷರಶಃ ಕರುಳುಬಳ್ಳಿಯ ಸಂಬಂಧ. ಅವರ ಬಡತನದ ಬವಣೆ ಎಷ್ಟೇ ಇರಲಿ, ಹೊತ್ತಿನ ತುತ್ತಿಗೆ ಕೊರತೆ ಇರಲಿ, ಅವರ ಗುಡಿಸಲಲ್ಲೋ ಮರ ಗಿಡಗಳ ನಡುವೆಯೋ ಪಂಚೆಯೋ ಹರಿದ ತುಂಡು ಸೀರೆಯಿಂದಲೇ ಜೋತಾಡುವ ಜೋಳಿಗೆಯೊಳಗೆ ಪುಟ್ಟ ಕೂಸೊಂದು ತಾಯ ಹಾಲುಂಡು ಮೊಗಮ್ಮಾಗಿ ಮಲಗಿಕೊಂಡಿರುತ್ತದೆ. ಸುಖ ನಿದ್ರೆಯಿಂದ ಎದ್ದ ಕಂದನಿಗೆ, ತಾಯಿ ಸೊಂಟಕ್ಕೆ ಕಟ್ಟಿದ ಜೋಳಿಗೆಯಲ್ಲಿ ಬೆಚ್ಚನೆಯ ಆಸರೆ. ತಾಯಿಯ ಅಕ್ಕರೆಯ, ವಾತ್ಸಲ್ಯದ, ಮಮತೆಯ ಮಡಿಲು ಸೀಮಾತೀತವಾದದ್ದು, ಭೇದಭಾವವಿಲ್ಲದ್ದು. ಹೆತ್ತ ತಾಯಿಯ ಮಡಿಲು ಕನ್ನಡ ಮಾತೆಯ ಮಡಿಲು, ಭಾರತಾಂಬೆಯ ಮಡಿಲು. ಹೀಗೆ ಇಡೀ ಭೂಮಂಡಲವೇ ತಾಯಿಯ ಆಸರೆಯ ಜೋಳಿಗೆ.

ಇಷ್ಟು ವಿಧವಿಧವಾದ ಅಂಶಗಳನ್ನು ಹೊಂದಿರುವ ಜೋಳಿಗೆ ಬೆಲೆ ಕಟ್ಟಲಾಗದಷ್ಟು ಅಮೂಲ್ಯವಾದದ್ದು. ಇದಕ್ಕೆ ಯಾವ ಬಂಧನವಿಲ್ಲ ನೋಡಿ! ಹೀಗೆ, ಈ ಸಾಮಾನ್ಯ ಜೋಳಿಗೆ ಅಸಾಮಾನ್ಯ ನೆಲೆಯಲ್ಲಿ ಬಿಂಬಿತವಾಗಲು ಕಾರಣ ಅದರ ವಿಶಾಲ ಪರಿಕಲ್ಪನೆಯೇ ಹೊರತು ಬೇರೇನೂ ಅಲ್ಲ. ಏನೂ ಅಲ್ಲದ, ಯಃಕಶ್ಚಿತ್ ಜೋಳಿಗೆ ಅನೇಕ ಬಗೆಯ ಶ್ರೇಷ್ಠತೆಗಳನ್ನು ಒಳಗೊಂಡಿದೆ. ಮಹಿಮೆಯಲ್ಲಿ ಮಾತ್ರ ಜಂಗಮ ಸ್ವರೂಪ.

ಇತ್ತೀಚೆಗೆ ಜೋಳಿಗೆಯ ಬಳಕೆ ಕಡಿಮೆಯಾಗಿರುವುದಂತೂ ಸತ್ಯ. ಮಜಬೂತಾದ ಜಿಪ್‌ಗಳಿಂದ ಭದ್ರವಾಗಿ ಬಂಧಿಸಲ್ಪಟ್ಟಿರುವ ರೆಕ್ಸಿನ್ ಹಾಗೂ ಚರ್ಮದ ಚೀಲ ಎಲ್ಲರ ಹೆಗಲಿಗೆ. ಹೀಗಿರುವಾಗಲೂ ಕೆಲವೊಮ್ಮೆ ಮನೆಯಿಂದ ಹೊರಡುವಾಗ ಜನಜಂಗುಳಿಯ ನಡುವೆ 'ಚೀಲ ಹುಷಾರು' ಎಂದು ಎಚ್ಚರಿಕೆ ಹೇಳಿ ಕಳಿಸುವವರೇ ಹೆಚ್ಚು. ಅಂದರೆ ಅದರಲ್ಲಿ ಏನೋ ಒಂದು ಬಗೆಯ ಸ್ವಾರ್ಥವಿದೆ, ಮುಚ್ಚುಮರೆ ಇದೆ ಅನಿಸುತ್ತದೆ. ನಮ್ಮಲ್ಲಿರುವ ವಸ್ತು ಎಲ್ಲಿ ಕೈತಪ್ಪಿ ಹೋಗಿ ಬಿಡುವುದೋ ಎಂಬ ಭಯವಿದೆ. ಆಧುನಿಕ ಯುಗದಲ್ಲಿ ಹೀಗೆಯೇ ಎಷ್ಟೋ ಜನರ ಮನೋಭಾವವೂ ಇದೆ. ಆದರೆ ಜೋಳಿಗೆ ಮಾತ್ರ ಯಾರ ಕೈಯಲ್ಲಿ ಸಿಕ್ಕರೂ ಅದೇ ಸ್ಥಿತಿಯಲ್ಲಿ ಹಿಂದಿರುಗಿ ಬರುವಂತದ್ದು

ದರ್ಜಿ ಹೊಲಿದು ಕೊಡುವ ಜೋಳಿಗೆ ನಮ್ಮ ಉಳುವ ಯೋಗಿ ಬೆಳೆದುಕೊಡುವ ಹತ್ತಿಯ ಅನೇಕ ನೂಲುಗಳಿಂದ ತಯಾರಾದ ಬಟ್ಟೆಯಿಂದ ರೂಪುಗೊಂಡಿದೆ. ಅದು ತನ್ನಲ್ಲಿ ತುಂಬಿದ ಸರಕುಗಳು ಹೆಚ್ಚಿರಲಿ ಕಡಿಮೆ ಇರಲಿ, ಹರಿದು ಅಂತ್ಯ ಕಾಣುವವರೆಗೂ ನಿರಾತಂಕವಾಗಿ, ತಾರತಮ್ಯವಿಲ್ಲದೆ ತನ್ನ ಕೆಲಸವನ್ನು ಮಾಡುತ್ತಲೇ ಇರುತ್ತದೆ. ಈ ಜೋಳಿಗೆಗೆ ಗುಂಡಿ, ಹುಕ್ಕು, ಕುಣಿಕೆ, ಜಿಪ್ ಯಾವುದೂ ಇರುವುದಿಲ್ಲ. ಒಂದು ರೀತಿಯಲ್ಲಿ ಬಿಚ್ಚಿಡುವಿಕೆಯ ಪ್ರತೀಕ. ಬೇಕಾದುದನ್ನು ತುಂಬಿಸಿಕೊಂಡು ಬೇಕಾದವರಿಗೆ ಕೊಡುವಂತಹ ಜೋಳಿಗೆ. ಪರೋಪಕಾರಿಯಾಗಿ ತನ್ನದೇ ಆದ ವಿಶೇಷ ಘನತೆಯನ್ನು ಬಾಳ್ವಿಕೆಯುದ್ದಕ್ಕೂ ಜೋಳಿಗೆ ಕಾಪಾಡಿಕೊಳ್ಳುತ್ತದೆ.

ಅಂತೆಯೇ ನಮ್ಮ ಜೀವನವೂ ಒಂದು ನಿರಾಕಾರ ಶಕ್ತಿಯಿಂದ ಹೆಣೆಯಲಾದ ಬಟ್ಟೆಯ ಅದೃಶ್ಯ ಜೋಳಿಗೆಯೇ. ಈ ಬದುಕಿನಲ್ಲಿ ಸಕಲ ಚರಾಚರರಿಗೂ ಒಂದಲ್ಲ ಒಂದು ಬಗೆಯ ತೊಡಕುಗಳು ತೊಂದರೆಗಳು ಇದ್ದೇ ಇರುತ್ತವೆ. ಜೀವನ ಜೋಳಿಗೆಯಲ್ಲಿ ನೋವು–ನಲಿವು, ಸೋಲು–ಗೆಲುವು, ಆರೋಗ್ಯ–ಅನಾರೋಗ್ಯ... ಹೀಗೆ ಹಲವು ದ್ವಂದ್ವಗಳು ತುಂಬಿಕೊಂಡಿವೆ. ಇವೆಲ್ಲವನ್ನು ಸಮಚಿತ್ತರಾಗಿ ಸ್ವೀಕರಿಸಿ, ಕಾಯಕವನ್ನು ಶ್ರದ್ಧೆಯಿಂದ ಮಾಡಿದರೆ ಈ ಜೋಳಿಗೆಗೊಂದು ಸಾರ್ಥಕತೆ. ಮನಸ್ಸೆಂಬ ಜೋಳಿಗೆಯೂ ಅಷ್ಟೇ. ಅದು ಮುಚ್ಚುವುದಿಲ್ಲ. ಇದಕ್ಕೆ ಯಾವ ಬಂಧನಗಳಿಲ್ಲ. ಬೇಕಾದ, ಬೇಡವಾದ ಎಲ್ಲ ಬಗೆಯ ಸರಕುಗಳನ್ನು ಜೀವನದುದ್ದಕ್ಕೂ ತುಂಬಿಸಿಕೊಳ್ಳುತ್ತಲೇ ಇರುತ್ತದೆ. ಅನವಶ್ಯಕ ವಿಷಯಗಳನ್ನು ತುಂಬಿಸಿಟ್ಟರೆ, ಜೋಳಿಗೆ ಹರಿದುಹೋಗುವುದಲ್ಲವೇ? ಅದಕ್ಕೊಂದು ಉಪಾಯವಿದೆ. ಜೀವನದ ಪಯಣದಲ್ಲಿ ನಡುನಡುವೆ ನಿಂತು, ಬೇಡವಾದ ಸರಕುಗಳನ್ನು ಹೊರಹಾಕಿ, ಬೇಕಾಗುವಷ್ಟನ್ನು ಮಾತ್ರ ಇಟ್ಟುಕೊಂಡರೆ ಜೋಳಿಗೆಯ ಘನತೆಯೂ ಉಳಿಯಿತು, ಬಾಳಿಕೆಯೂ ಹೆಚ್ಚು. ನಾವು ಮುಚ್ಚುಮರೆಯಿಲ್ಲದೆ ಎಷ್ಟು ಬಿಚ್ಚಿಡುತ್ತೇವೆಯೋ ಅಷ್ಟು ಸ್ನೇಹಮಯರಾಗುತ್ತೇವೆ.

ಬರಿದೇ ಜೋಳಿಗೆ, ಜೋಳಿಗೆ ಎಂದು ಹೀಯಾಳಿಸದಿರು ಎಲೆ ಮಾನವ; ಇದರೊಳಗುಂಟು ನೋವು–ನಲಿವು, ನಾಳಿನ ಕನಸು, ಪರಹಿತವು. ಹೊಟ್ಟೆಬಾಕತನ ಇಲ್ಲ ಇದರಲ್ಲಿ. ಎಷ್ಟು ಬೇಕು ಅಷ್ಟೇ ಸಂಗ್ರಹಿಸುವ ಪ್ರಾಮಾಣಿಕತೆಯುಂಟು. ತೆರೆದ ಜೋಳಿಗೆಯಲ್ಲಿ, ತುಂಬಿಸುವ, ಕೊಡುವ ಕೆಲಸವವು ಸರಾಗವಾಗಿ ನಿರಂತರ ಸಾಗುತ್ತಿರುವಲ್ಲಿ ಈ ಜೋಳಿಗೆ ಎನ್ನುವ ಪದ ಯಃಕಶ್ಚಿತ್ ಆಗಲು ಸಾಧ್ಯವೇ? ■